





ಮೀಟರ್‌ಗಳು, ಎನ್–95 ಮಾಸ್ಕ್‌ಗಳು, ಹ್ಯಾಂಡ್ ಗ್ಲೋವ್ಸಗಳು, ಹ್ಯಾಂಡ್ ಸ್ಯಾನಿಟೈಜರ್‌ಗಳು ಮತ್ತು ಒಂದು ಬಾರಿ ಬಳಸುವ ಬೆಡ್‌ಶಿಟ್‌ಗಳು ಮತ್ತು ದಿಂಬಿನ ಕವರ್‌ಗಳಂತಹ ಕೋವಿಡ್‌ಕೇರ್ ಉಪಕರಣಗಳನ್ನು ಒದಗಿಸಲಾಗಿದೆ.

- ಉತ್ತರಕನ್ನಡ ಜಿಲ್ಲೆಯ 35 ಕ್ಕೂ ಹೆಚ್ಚು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ಅಭಿಯಾನವನ್ನು ಆಯೋಜಿಸಲಾಗಿದೆ ಮತ್ತು ದೂರದ ಹಾಗೂ ದುರ್ಗಮ ಪ್ರದೇಶದ ಹಳ್ಳಿಗರಿಗೆ ಲಸಿಕೆಯನ್ನು ಪಡೆಯಲು ವಾಹನದ ಬೆಂಬಲವನ್ನು ಒದಗಿಸಿ, ಮೂರು ತಿಂಗಳಲ್ಲಿ ಒಟ್ಟಾರೆ 35000 ಡೋಸ್ ಲಸಿಕೆಗಳನ್ನು ನೀಡುವಲ್ಲಿ ಪ್ರಮುಖ ಪಾತ್ರವಹಿಸಿದೆ.
- ಸಿದ್ದಾಪುರ ತಾಲೂಕಿನ ಕರ್ಜಗಿ ಗ್ರಾಮದಲ್ಲಿ ಜಲ ಮತ್ತು ಪರಿಸರ ಅಧ್ಯಯನ ಕೇಂದ್ರವನ್ನು ನಿರ್ಮಿಸಲಾಗಿದೆ.
- ಸಿದ್ದಿ ಬುಡಕಟ್ಟು ಸಮುದಾಯಕ್ಕೆ ಅವರ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಲು ಮತ್ತು ಅವರ ಆರ್ಥಿಕ ಬಿಕ್ಕಟ್ಟನ್ನು ನಿವಾರಿಸಲು ಅಡಿಕೆ ಸಸಿ, ನೀರಾವರಿ ಸೌಲಭ್ಯಗಳನ್ನು ಒದಗಿಸಲಾಗಿದೆ
- ಉತ್ತರಕನ್ನಡ ಜಿಲ್ಲೆಯ ಆಯ್ದ ತಾಲೂಕುಗಳಲ್ಲಿ ಸಮುದಾಯದ ಆಸ್ತಿಗಳನ್ನು ಸಂರಕ್ಷಿಸಲು ಮತ್ತು ನಕ್ಷೀಕರಿಸಲು ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಮತ್ತು ಗ್ರಾಮ ಪಂಚಾಯಿತಿಯ ಬೆಂಬಲದಡಿಯಲ್ಲಿ ಆ ಸಮುದಾಯದ ಆಸ್ತಿಗಳನ್ನು ನಿರ್ವಹಿಸಲು ಗ್ರಾಮ ಮಟ್ಟದ ಸಮಿತಿಯನ್ನು ಸಹ ರಚಿಸಲಾಗಿದೆ.
- ಈಡಲ್‌ಗೀವ್ ಪ್ರತಿಷ್ಠಾನ ಪ್ರಾಯೋಜಿತ ಗ್ರೋಫಂಡ್ ಅಡಿಯಲ್ಲಿ ಸ್ವ ಸಾಮರ್ಥ್ಯ ವೃದ್ಧಿಸಿಕೊಳ್ಳಲು ರಾಷ್ಟ್ರದಾದ್ಯಂತ ಆಯ್ಕೆಯಾದ ಆಯ್ದ 100 ಸಂಸ್ಥೆಗಳಲ್ಲಿ ಮನುವಿಕಾಸ ಕೂಡ ಒಂದಾಗಿದೆ.
- ಸಿದ್ಧಿ ಸಮುದಾಯದ ಮಹಿಳೆಯರಿಗೆ ಉದ್ಯಮಶೀಲತೆಯ ಬೆಂಬಲವನ್ನು ಒದಗಿಸಲಾಗಿದೆ. ಸಿದ್ಧಿ ಬುಡಕಟ್ಟು ಯುವಕರಿಗೆ ಮತ್ತು ಮೀನುಗಾರರ ಸಮುದಾಯದವರಿಗೆ ಆತಿಥ್ಯ ತರಬೇತಿ / ಹೋಟೆಲ್ ಮ್ಯಾನೇಜ್‌ಮೆಂಟ್ ತರಬೇತಿಯನ್ನು 02 ತಿಂಗಳ ಅವಧಿಗೆ ಪ್ರಾರಂಭಿಸಿ ಅವರಿಗೆ ಭಾರತ ಮತ್ತು ಜಗತ್ತಿನಾದ್ಯಂತ ಪ್ರತಿಷ್ಟಿತ ಹೋಟೆಲ್‌ಗಳಲ್ಲಿ ಉದ್ಯೋಗಾವಕಾಶಗಳನ್ನು ಪಡೆಯಲು ಸಹಕಾರಿಯಾಗಿದೆ. ಸಿದ್ದಿ ಸಮುದಾಯದವರಿಗಾಗಿಯೇ ರೈತ ಉತ್ಪಾದಕ ಕಂಪನಿಯನ್ನು ಸ್ಥಾಪಿಸಲು ಸಂಸ್ಥೆ ಸಿದ್ದತೆ ನಡೆಸಿದೆ.
- ಸಂಸ್ಥೆಯು ಭೂರಹಿತ ಮತ್ತು ಕೃಷಿ ಕೂಲಿ ಕಾರ್ಮಿಕರ ಸುಮಾರು 6000 ಕುಟುಂಬಗಳಿಗೆ 'ಮಹಾತ್ಮಾ ಗಾಂಧಿ ರಾಷ್ಟ್ರಿಯ ಉದ್ಯೋಗ ಖಾತರಿ ಅಧಿನಿಯಮದ ಅಡಿಯಲ್ಲಿ ಉದ್ಯೋಗ ಪಡೆಯಲು ಸಹಕರಿಸದೆ.





## ಜಲಸಂರಕ್ಷಣೆ ಮತ್ತು ಪರಿಸರ ಸಂರಕ್ಷಣೆ ಯೋಜನೆಯಲ್ಲಿ ಸಂಸ್ಥೆಯ ಪಾತ್ರ:

ಮನುವಿಕಾಸ ಸಂಸ್ಥೆಯು ಸಣ್ಣಕೆರೆ ಮತ್ತು ನೈಸರ್ಗಿಕ ಜಲ ಸಂರಕ್ಷಣೆಗೆ ವಿನೂತನವಾದ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಸಂಸ್ಥೆಯು ವಿವಿಧ ಸಂಘ ಸಂಸ್ಥೆಗಳ ಪ್ರಾಯೋಜಕತ್ವದಲ್ಲಿ ಮತ್ತು ಸ್ಥಳೀಯ ಜನರ ಸಹಭಾಗಿತ್ವದಲ್ಲಿ ಕೆರೆಗಳ ಅಭಿವೃದ್ಧಿ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಕೆರೆ ಅಭಿವೃದ್ಧಿ ಪಡಿಸುವ ಸಂಧರ್ಭದಲ್ಲಿ ನೈಸರ್ಗಿಕ ಜಲದ ಲಭ್ಯತೆಯ ಆಧಾರದ ಮೇಲೆ ಸಂಸ್ಥೆಯು ಸೂಕ್ತ ನಿರ್ಧಾರ ಕೈಗೊಳ್ಳುತ್ತದೆ.

ಕೆರೆ ಅಭಿವೃದ್ಧಿಪಡಿಸಿದ ನಂತರ ರೈತರಿಗೆ ಕೃಷಿ ಇಳುವರಿ ಹೆಚ್ಚಿಸಲು ಮತ್ತು ಕೃಷಿ ಆಧಾರಿತ ಆದಾಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ತರಬೇತಿ ಮತ್ತು ಮಾರ್ಗದರ್ಶನ ನೀಡಲಾಗುತ್ತದೆ. ಮಹಿಳೆಯರನ್ನು ಸಂಘಟಿಸಿ ಉಳಿತಾಯ ಮನೋಭಾವವನ್ನು ಬೆಳೆಸಿ ವಿವಿಧ ಆದಾಯ ಚಟುವಟಿಕೆಗಳು ಮತ್ತು ಕೈತೋಟ ನಿರ್ಮಾಣಗಳಲ್ಲಿ ತೊಡಗಿಸಲಾಗುತ್ತಿದೆ. ಕೃಷಿ ಅರಣ್ಯವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸಂಸ್ಥೆಯಿಂದ ಅರಣ್ಯ ಸಸಿಗಳನ್ನು ವಿತರಿಸಲಾಗುತ್ತಿದೆ. ರೈತರ ಸಹಭಾಗಿತ್ವದಲ್ಲಿ ಮೀನು ಸಾಕಾಣಿಕೆಯನ್ನು ಸಹ ಪ್ರೋತ್ಸಾಹಿಸಲಾಗುತ್ತಿದೆ.

## ಸಂಸ್ಥೆಯು ಕೈಗೊಂಡ ಶೈಕ್ಷಣಿಕ ಅಭಿವೃದ್ಧಿ ಯೋಜನೆ :

ಸಂಸ್ಥೆಯು ನಿರ್ಗತಿಕ ಮಕ್ಕಳ ಮತ್ತು ಕಡುಬಡ ಕುಟುಂಬದ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ವಿಶೇಷ ಗಮನ ನೀಡುತ್ತಿದೆ. ನಿರ್ಗತಿಕ ಮಕ್ಕಳನ್ನು ಗುರುತಿಸಿ ಅವರಿಗೆ ಪಠ್ಯಪುಸ್ತಕ, ಬಟ್ಟೆಗಳು ಮತ್ತು ದಿನನಿತ್ಯ ಮನೆ ಬಳಕೆ ಮೂಲಭೂತ ವಸ್ತುಗಳನ್ನು ವಿತರಿಸಲಾಗುತ್ತಿದೆ. ಕಡುಬಡಕುಟುಂಬದ ಮಕ್ಕಳಿಗೆ ಕಲಿಕೋಪಕರಣ ಮತ್ತು ನಿರಂತರ ಕಲಿಕೆಗೆ ಪೂರಕ ಅಗತ್ಯ ವಸ್ತುಗಳನ್ನು ಒದಗಿಸಲಾಗುತ್ತಿದೆ. ಸಂಸ್ಥೆಯು ಕಾರ್ಯನಿರ್ವಹಿಸುತ್ತಿರುವ ಹಳ್ಳಿಗಳ ಆಯ್ದ ಮಕ್ಕಳಿಗೆ ಶಿಷ್ಯವೇತನ ವಿತರಿಸಲಾಗುತ್ತಿದೆ. ಅಂಗವಿಕಲ ಮಕ್ಕಳ ಅಭಿವೃದ್ಧಿಗೂ ಸಂಸ್ಥೆ ವಿವಿಧ'ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

ಹೆಚ್ಚಿನ ಮಾಹಿತಿಗಾಗಿ ಕೆಳಗಿನ ಕ್ಯೂಆರ್‌ಕೋಡ್‌ಅನ್ನು ಸ್ಕ್ಯಾನ್ ಮಾಡಿ

# ಮನುವಿಕಾಸ

MANUVIKASA

ಶಿಕ್ಷಣ, ಪರಿಸರ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ







ಸಂಪರ್ಕ ವಿಳಾಸ

ಮನುವಿಕಾಸ

**ನೋಂದಾಯಿತ ಕಛೇರಿ**
ಸಾ: ಕರ್ಜಗಿ, ಪೋ: ಬಾಳೂರು ತಾ: ಸಿದ್ದಾಪುರ
ಉತ್ತರಕನ್ನಡ–581340, ಕರ್ನಾಟಕ, ಭಾರತ
ದೂ: 9845982552

**ಆಡಳಿತ ಕಛೇರಿ :**
"ಶ್ರೀ ಮಾತಾ"ಬಿಲ್ಡಿಂಗ್, ವಿಜಯನಗರ, ತಾ: ಶಿರಸಿ
ಉತ್ತರಕನ್ನಡ–581401, ಕರ್ನಾಟಕ, ಭಾರತ
ದೂ: 9845982552

email : manuvikasa@gmail.com web : www.manuvikasa.org



## ಮನುವಿಕಾಸ ಸಂಸ್ಥೆಯ ಕುರಿತು...

ಮನುವಿಕಾಸ ಒಂದು ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಯಾಗಿದ್ದು 2003ನೇ ಇಸ್ವಿಯಲ್ಲಿ ನೋಂದಣಿಗೊಂಡು (ನೋಂದಣಿ ಸಂಖ್ಯೆ 171/03–04) ಶಿಕ್ಷಣ, ಪರಿಸರ ಮತ್ತು ಗ್ರಾಮೀಣ ಅಭಿವೃದ್ಧಿ ಕ್ಷೇತ್ರದಲ್ಲಿ ಉತ್ತರಕನ್ನಡ, ಧಾರವಾಡ, ಶಿವಮೊಗ್ಗ, ಹಾವೇರಿ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಸಮಾಜದ ಬೇರೆ ಬೇರೆ ಸ್ಥರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಮಾನ ಮನಸ್ಕರ ಗುಂಪು ಈ ಸಂಸ್ಥೆಯನ್ನು ಹುಟ್ಟು ಹಾಕಿದೆ. ಬಡತನ ನಿವಾರಣೆ, ಮಹಿಳಾ ಸಬಲೀಕರಣ, ನೈಸರ್ಗಿಕ ಸಂಪನ್ಮೂಲಗಳ ಸಮರ್ಪಕ ನಿರ್ವಹಣೆ, ವಿವಿಧ ಸಾಮಾಜಿಕ ಸಮಸ್ಯೆಗಳ ವಿರುದ್ಧ ಜನಜಾಗೃತಿ, ಮಕ್ಕಳಹಕ್ಕು ಮತ್ತು ಮಾನವ ಹಕ್ಕುಗಳ ಅಳವಡಿಕೆ, ಉದ್ಯೋಗ ಸೃಷ್ಟಿ, ಆರೋಗ್ಯ ಸೇವೆ, ಅಂಗವಿಕಲರಿಗೆ ಸಹಾಯ ಮತ್ತಿತರೇ ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ವಿಷಯಗಳ ಕುರಿತು ಸಂಸ್ಥೆಯು ಕಾರ್ಯನಿರ್ವಹಿಸುತ್ತಿದೆ.

### ಸಂಸ್ಥೆಯ ಉದ್ದೇಶಗಳು :

- ಭಾರತದಲ್ಲಿ ಜನಿಸಿದ ದುರ್ಬಲ ಮತ್ತು ಬಡವರ್ಗದ ಎಲ್ಲ ಜನರಿಗೆ ಅವರ ಜನ್ಮ ಸ್ಥಳ, ಲಿಂಗ, ಜಾತಿ ಮತ್ತಿತರ ತಾರತಮ್ಯ ತೋರದೇ ಅವರ ಶೈಕ್ಷಣಿಕ, ನೈಸರ್ಗಿಕ, ಆರ್ಥಿಕ, ಸಾಮಾಜಿಕ ಅಗತ್ಯತೆಗಳನ್ನು ಪೂರೈಸಿ ದೇಶದ ಸರ್ವತೋಮುಖ ಅಭಿವೃದ್ಧಿಗೆ ಪ್ರಯತ್ನಿಸುವುದು.
- ನೈಸರ್ಗಿಕ ಸಂಪನ್ಮೂಲಗಳಾದ ನೀರು, ಭೂಮಿ ಮತ್ತು ಅರಣ್ಯ ಸಂಪತ್ತನ್ನು ರಕ್ಷಿಸಿ, ಅದು ಕೆಲವೇ ಜನರ ಒಡೆತನಕ್ಕೆ ಒಳಪಡದೇ ಎಲ್ಲರ ಅವಶ್ಯಕತೆಗಳನ್ನು ಪೂರೈಸುವಂತೆ ನಿರ್ವಹಿಸುವುದು.

### ಈ ಮೇಲಿನ ಮುಖ್ಯ ಉದ್ದೇಶಗಳೊಂದಿಗೆ ಸಂಸ್ಥೆ ಈ ಕೆಳಗಿನ ಇತರ ಉದ್ದೇಶಗಳನ್ನು ಹೊಂದಿದೆ.

- ಮಹಿಳೆಯರನ್ನು ಸ್ವ–ಸಹಾಯ ಸಂಘದ ತತ್ವದಡಿಯಲ್ಲಿ ಒಂದುಗೂಡಿಸಿ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಉನ್ನತೀಕರಣ ಗೊಳಿಸುವುದು.
- ಬಡವರು, ದೀನದಲಿತರು, ವೃದ್ಧರು, ಅಂಗವಿಕಲರು ಮತ್ತು ನಿರ್ಗತಿಕರ ಆರೋಗ್ಯ ಸೇವೆ.
- ಆರ್ಥಿಕವಾಗಿ ಹಿಂದುಳಿದ ಪ್ರತಿಭಾನ್ವಿತ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಪ್ರೋತ್ಸಾಹ.
- ನಿರುದ್ಯೋಗಿ ಯುವಕರಿಗೆ ಸ್ವ–ಉದ್ಯೋಗ ಮಾಹಿತಿ ಮತ್ತು ತರಬೇತಿ.
- ಸಾವಯವ ಮತ್ತು ಪರಿಸರ ಪೂರಕ ಕೃಷಿಗೆ ಪ್ರೋತ್ಸಾಹ.

### ಮನುವಿಕಾಸ ಸಂಸ್ಥೆಯು ಕೆಲಸ ನಿರ್ವಹಿಸುವ ರೀತಿ:

ಮನುವಿಕಾಸ ಸಂಸ್ಥೆಯು ಒಂದು ಜನಪರ ಸಂಘಟನೆಯಾಗಿ ಬೆಳೆದು ಬಂದಿದ್ದು, ಗ್ರಾಮೀಣ ಅಭಿವೃದ್ಧಿಯಲ್ಲಿ ಅಭಿರುಚಿಯಿರುವ ಯುವ ಸ್ವಯಂ ಸೇವಕರ ಸಂಘಟನೆಯಾಗಿದೆ. ಸಂಸ್ಥೆಯು ಯಾವುದೇ ಆರ್ಥಿಕ ಲಾಭವನ್ನು ಬಯಸದೇ ಜನರ ಜೀವಂತ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಬಂದಿದೆ. ನವ ಸಮಾಜ ನಿರ್ಮಾಣದ ಕನಸನ್ನು ಹೊತ್ತು ಶ್ರಮಿಸುತ್ತಿರುವ ಸಂಸ್ಥೆ ಬೇರೆ ಬೇರೆ ಉದ್ಯೋಗದಲ್ಲಿ ಇರುವ ಜನರಲ್ಲಿ ಗ್ರಾಮೀಣಾಭಿವೃದ್ಧಿಯ ಕುರಿತು ಮಾಹಿತಿ ನೀಡಿ ಅವರನ್ನು ಗ್ರಾಮದ ಕಡೆ ಮುಖ ಮಾಡುವಂತೆ ಪ್ರೇರೇಪಿಸುತ್ತಿದೆ. ಸ್ಥಳೀಯ ಸಾರ್ವಜನಿಕರ ಸಹಕಾರದೊಂದಿಗೆ ಕೆಲಸ ನಿರ್ವಹಿಸುತ್ತಿದ್ದು, ಇತರ ಸಂಘ ಸಂಸ್ಥೆಗಳು, ಸರ್ಕಾರದ ವಿವಿಧ ಇಲಾಖೆಗಳೊಂದಿಗೆ ಒಳ್ಳೆಯ ಸಂಬಂಧ ಹೊಂದಲು ಬಯಸುತ್ತದೆ. ಭ್ರಷ್ಟಾಚಾರ, ನೈಸರ್ಗಿಕ ಸಂಪನ್ಮೂಲಗಳ ದುರ್ಬಳಕೆ ಮತ್ತು ದೀನದಲಿತರ ಮೇಲಿನ ದೌರ್ಜನ್ಯದ ಸಂದರ್ಭದಲ್ಲಿ ತಾರತಮ್ಯ ತೋರದೇ ವಿರೋಧಿಸುವ ಎದೆಗಾರಿಕೆಯನ್ನು ಸಂಸ್ಥೆ ಹೊಂದಿದೆ. ಒಟ್ಟಾರೆ ಜನರ ಸಹಭಾಗಿತ್ವವೇ ಅಭಿವೃದ್ಧಿಯ ಮೂಲಮಂತ್ರ ಎಂದು ನಂಬಿರುವ ಸಂಸ್ಥೆ ತನ್ನಎಲ್ಲ ಅಭಿವೃದ್ಧಿಪರ ಚಟುವಟಿಕೆಗಳಲ್ಲಿ ಜನರ ಸಹಭಾಗಿತ್ವವನ್ನು, ತರಬೇತಿ, ಕಾರ್ಯಾಗಾರ ಮತ್ತು ತಾಂತ್ರಿಕತೆಗಳ ವರ್ಗಾವಣೆ ಮೂಲಕ ನಿರ್ವಹಿಸುತ್ತಿದೆ.

### ಮನುವಿಕಾಸ ಸಂಸ್ಥೆಯ ಸಾಧನೆಗಳು :

- ಉತ್ತರಕನ್ನಡ, ಹಾವೇರಿ, ಧಾರವಾಡ, ಶಿವಮೊಗ್ಗ ಜಿಲ್ಲೆಗಳಲ್ಲಿ 3544 ಇಂಗುಗುಂಡಿ ಅಥವಾ ಕೃಷಿ ಹೊಂಡಗಳನ್ನು ಅಭಿವೃದ್ಧಿಪಡಿಸಲಾಗಿದೆ. ಸುಮಾರು 3 ರಿಂದ 30 ಎಕರೆ ವಿಸ್ತೀರ್ಣದ 280 ಮಧ್ಯಮ ಮತ್ತು ದೊಡ್ಡ ಕೆರೆಗಳನ್ನು ಹೂಳೆತ್ತಿ ಅಭಿವೃದ್ಧಿಪಡಿಸಲಾಗಿದೆ ಮತ್ತು ಇದು ಪ್ರತಿ ವರ್ಷ ಒಟ್ಟಾರೆಯಾಗಿ 10,000 ಮಿಲಿಯನ್ ಲೀಟರ್ ನೀರನ್ನು ಸಂಗ್ರಹಣ ಮಾಡಲು ಸಹಕಾರಿಯಾಗಿದೆ.
- ಒಟ್ಟೂ 31790 ಹೆಕ್ಟೇರ್ ಕೃಷಿ ಭೂಮಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸಿದೆ, ಈ ಮೂಲಕ 15000 ರೈತರುಎರಡನೇ ಬೆಳೆ ಪಡೆಯಲು ಸಹಕಾರಿಯಾಗಿದೆ ಮತ್ತು 350 ಹೆಕ್ಟೇರ್‌ಗಿಂತಲೂ ಹೆಚ್ಚು ಪ್ರದೇಶದಲ್ಲಿ ರೈತ ಸಮುದಾಯ ತೋಟಗಾರಿಕೆ ಬೆಳೆ ಬೆಳೆಯಲು ಕೃಷಿ ಹೊಂಡಗಳಿಂದ ಸಾಧ್ಯವಾಗಿದೆ.
- ಸಿಸ್ಟಂ ಆಫ್ ರೈಸ್ ಇಂಟೆನ್ಸಿಫಿಕೇಷನ್ (SRI) ವಿಧಾನವನ್ನು ಅಳವಡಿಸಿಕೊಂಡು ಸುಮಾರು 800 ಎಕರೆ ಭೂಮಿಯಲ್ಲಿ ರೈತರು ಶೇ.30ರಷ್ಟು ಹೆಚ್ಚುವರಿ ಬೆಳೆ ಪಡೆಯುತ್ತಿದ್ದಾರೆ.
- ಒಟ್ಟು 3000ಕ್ಕೂ ಅಧಿಕ ಸ್ವಸಹಾಯ ಗುಂಪುಗಳು (ಎಸ್.ಎಚ್.ಜಿ) ಮತ್ತು 1000ಕ್ಕೂ ಅಧಿಕ ಜಂಟಿ ಹೊಣೆಗಾರಿಕೆ ಗುಂಪುಗಳ (ಜೆ.ಎಲ್.ಜಿ) ಮೂಲಕ ಆದಾಯ ಉತ್ಪಾದನೆ ಚಟುವಟಿಕೆಗಳಿಗಾಗಿ 10000 ಕುಟುಂಬಗಳಿಗೆ 50 ಕೋಟಿ ರೂಪಾಯಿ ಕಿರುಬಂಡವಾಳವನ್ನು ನೀಡುವಲ್ಲಿ ಪ್ರಮುಖ ಪಾತ್ರವಹಿಸಿದೆ.
- ಶಿಕ್ಷಣವನ್ನು ಮುಂದುವರಿಸಲು 1800 ಬಡ ಮತ್ತು ಅನಾಥ ಮಕ್ಕಳಿಗೆ ಕಲಿಕಾ ಸಾಮಗ್ರಿಗಳು, ಮೂಲಭೂತ ಅಗತ್ಯ ಸಾಮಗ್ರಿಗಳು ಮತ್ತು ವಿದ್ಯಾರ್ಥಿ ವೇತನವನ್ನು ಒದಗಿಸಲಾಗಿದೆ.
- ಸುಮಾರು 150 ಹೊಗೆರಹಿತ ನೀರಿನ ಒಲೆಗಳು ಮತ್ತು 250 ಅಡುಗೆ ಒಲೆಗಳನ್ನು ಅಭಿವೃದ್ಧಿ ಪಡಿಸಲಾಗಿದೆ.









- ಪರಿಸರ ಸಂರಕ್ಷಣೆ ಮತ್ತು ಜೀವ ವೈವಿಧ್ಯ ಸಂರಕ್ಷಣೆಗೆ ಹಗಲಿರುಳೂ ಶ್ರಮಿಸುತ್ತಿರುವ ಸಂಸ್ಥೆಯು ಜೀವ ವೈವಿಧ್ಯ ದಾಖಲಾತಿ ನಡೆಸಿದೆ.
- ಸಮುದಾಯ ಅರಣ್ಯ ಪ್ರದೇಶದಲ್ಲಿ ಸುಮಾರು 10000 ಇಂಗುಗುಂಡಿಗಳನ್ನು ರಚಿಸಲಾಗಿದೆ.
- ಗ್ರಾಮೀಣ ಯುವಕ/ಯುವತಿಯರಿಗೆ ಡ್ರೈವಿಂಗ್, ಕಂಪ್ಯೂಟರ್, ಬ್ಯೂಟಿಷಿಯನ್, ಕೆಟರಿಂಗ್, ಡೇರಿ ಮತ್ತು ಹೊಲಿಗೆ ಕುರಿತು 4573 ಮಹಿಳೆಯರಿಗೆ ಕೌಶಲ್ಯ ತರಬೇತಿಗಳನ್ನು ಒದಗಿಸಲಾಗಿದೆ.
- "ಇಂಟರ್ನೆಟ್ ಸಾಥಿ" ಕಾರ್ಯಕ್ರಮದ ಅಡಿಯಲ್ಲಿ 1.79 ಲಕ್ಷ ಗ್ರಾಮೀಣ ಮಹಿಳೆಯರಿಗೆ ಇಂಟರ್ನೆಟ್ ಸಾಕ್ಷರತೆಯನ್ನು ಒದಗಿಸಲಾಗಿದೆ.
- ಚೌಬಿನೇತರ ಅರಣ್ಯ ಉತ್ಪನ್ನಗಳ ಸಸಿಗಳು ಮತ್ತು ಹಣ್ಣಿನ ಸಸಿಗಳನ್ನು ಸಂಗ್ರಹಿಸಿ 44000 ಕ್ಕೂ ಹೆಚ್ಚು ಸಸಿಗಳನ್ನು ನೆಡಲಾಗಿದೆ.
- ಪ್ರಗತಿಮಿತ್ರ ರೈತ ಉತ್ಪಾದಕ ಕಂಪನಿಯ ಮೂಲಕ ಉತ್ತರಕನ್ನಡ ಜಿಲ್ಲೆಯ ಅಡಿಕೆ ಬೆಳೆಗಾರ ರೈತರಿಗೆ ಸೇವೆ ಸಲ್ಲಿಸಲು ಶಿರಸಿ ತಾಲೂಕಿನ ಬಾಳೆಗದ್ದೆಯಲ್ಲಿ ಅಡಿಕೆ ಸಂಸ್ಕರಣಾ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಕರಾವಳಿ ಪ್ರದೇಶದ ತರಕಾರಿ ಬೆಳೆಗಾರರಿಗೆ ಗೋಕರ್ಣ ತರಕಾರಿ ಬೆಳೆಗಾರ ರೈತ ಉತ್ಪಾದಕರ ಸಂಘ ಮತ್ತು ಉತ್ತರಕನ್ನಡ ಜಿಲ್ಲೆಯ ಮೀನುಗಾರ ಮಹಿಳೆಯರಿಗಾಗಿ ಉತ್ತರಕನ್ನಡ ಜಿಲ್ಲಾ ಮಹಿಳಾ ಮೀನು ಮಾರಾಟಗಾರರ ಹಾಗೂ ಉತ್ಪಾದಕರ ಸಂಘ ರಚಿಸಲಾಗಿದೆ.
- ಕೋವಿಡ್ ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿ ನಿರುದ್ಯೋಗಿಯಾದ ಅಸಹಾಯಕ ಪೋಷಕರ ಮಕ್ಕಳಿಗೆ ಶಿಕ್ಷಣಕ್ಕಾಗಿ ವಿದ್ಯಾರ್ಥಿ ವೇತನವನ್ನು ಒದಗಿಸಲಾಗಿದೆ
- ಕಾರವಾರ ಮತ್ತು ಅಂಕೋಲಾ ತಾಲೂಕಿನ ಮೀನುಗಾರ ಮಹಿಳಾ ಸ್ವಸಹಾಯ ಸಂಘದ ಸದಸ್ಯರಿಗೆ ಮೀನುಗಳನ್ನು ಸಂಗ್ರಹಿಸಲು ಮತ್ತು ಮಾರಾಟ ಮಾಡಲು ಮೀನು ಸಂಗ್ರಹ ಪೆಟ್ಟಿಗೆಗಳನ್ನು ಒದಗಿಸಲಾಗಿದೆ.
- ಸಂಸ್ಥೆಯು ಕೋವಿಡ್–19ರ ಸಂದರ್ಭದಲ್ಲಿ ಉತ್ತರ ಕನ್ನಡ ಜಿಲ್ಲೆಯ 10000 ಕ್ಕೂ ಹೆಚ್ಚು ಬಡ ಮತ್ತು ಬುಡಕಟ್ಟು ಸಮುದಾಯಗಳಿಗೆ ದಿನಸಿ ಕಿಟ್‌ಗಳನ್ನು ವಿತರಿಸಿದೆ.
- ಕೋವಿಡ್‌ಕೇರ್ ಆಸ್ಪತ್ರೆಗಳಿಗೆ ಮತ್ತು ಆಶಾ ಕಾರ್ಯಕರ್ತೆಯರು, ಕೋವಿಡ್–19 ಮುಂಚೂಣಿಯ ಯೋಧರು, ಗ್ರಾಮ ಪಂಚಾಯತಿಯ ಸದಸ್ಯರುಗಳಿಗೆ, ಶುಶ್ರೂಶಕಿಯರಿಗೆ ಮತ್ತು ಪಂಚಾಯತ್ ಮಟ್ಟದಲ್ಲಿ ಸ್ವಚ್ಛತಾಕರ್ಮಿಗಳಿಗೆ ಆಕ್ಸಿಜನ್ ಕಾನ್ಸೆಂಟ್ರೇಟರ್‌ಗಳು, ಪಲ್ಸ್ ಆಕ್ಸಿ ಮೀಟರ್‌ಗಳು, ಇನ್‌ಫ್ರಾರೆಡ್ ಥರ್ಮೋ